**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *04.01.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ.ಎಸ್.ಆರ್ ರವರಿಂದಃ**

. ನನ್ನ ಬ್ಯಾಂಕ್ ಅಕೌಂಟ್ ನಂಬರ್ 17152300000290 ಇರುತ್ತದೆ. ನನಗೆ ವೇದಾವತಿ ಅವರನ್ನು ನನ್ನ ಪರಿಚಯದವರು ಪರಿಚಯಿಸಿದ್ದರು. ವೇದಾವತಿ ಅವರ ಮನೆ ತಿಲಕ್ ನಗರ, 4 ನೇ ಕ್ರಾಸ್ ನಲ್ಲಿದೆ. ನನಗೆ ವೇದಾವತಿ ಅವರ ಮನೆ ವಿಳಾಸ ಗೊತ್ತೇ ಇಲ್ಲ ಎಂದರೆ ಸರಿಯಲ್ಲ. ನಾನು ಶ್ರೀರಾಮ ಚಿಟ್ ಫಂಡ್ಸ್ ನಲ್ಲಿ ಚೀಟಿ ಹಾಕಿಲ್ಲ. ಪೊಲೀಸರ ಮುಂದೆ ನಾನು ಚಿಟ್ ಫಂಡ್ಸ್ ಹಣಕ್ಕೆ ಸೆಕ್ಯೂರಿಟಿ ಆಗಿ ಚೆಕ್ ಕೊಟ್ಟಿದ್ದೇನೆ ಎಂದು ಹೇಳಿಕೆ ಕೊಟ್ಟಿಲ್ಲ. ವೇದಾವತಿ ಅವರಿಂದ 2017 ರಲ್ಲಿ ಹಣ ಪಡೆದಿದ್ದೇನೆ ಆದರೆ ದಿನಾಂಕ ನೆನಪಿಲ್ಲ. ಆ ಕಾಲಕ್ಕೆ ಅವರಿಂದ 50 ಸಾವಿರ ಹಣ ಪಡೆದಿದ್ದೇನೆ. ನಾನು ವೇದಾವತಿ ಅವರ ಹಣವನ್ನು ಎಷ್ಟು ದಿನಗಳ ಬಳಿಕ ವಾಪಸ್ಸು ಕೊಟ್ಟಿದ್ದೇನೆ ಎಂದು ನೆನಪಿಲ್ಲ. ನಾನು ವೇದಾವತಿಯವರಿಂದ 1,34,000/- ಹಣವನ್ನು ಸಾಲವಾಗಿ ಪಡೆದು ಅದನ್ನು ಮಾಸಿಕ ಶೇ.1 ರ ಬಡ್ಡಿಯೊಂದಿಗೆ ಹಿಂದಿರುಗಿಸಿದ್ದೇನೆ ಎಂದರೆ ನೆನಪಿಲ್ಲ. ವೇದಾವತಿ ಅವರು ಚೆಕ್ ಅನ್ನು ವಾಪಸ್ಸು ಕೊಡಲು ತಯಾರಿಸಿದ್ದರು ಸಹ ನಾನೇ ಅದನ್ನು ವಾಪಸ್ಸು ಪಡೆಯಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಚೆಕ್ ವಾಪಸ್ಸು ಕೊಡದೇ ಇದುದ್ದಕ್ಕೆ ನಾನು ನೋಟಿಸ್ ಕಳುಹಿಸಿಲ್ಲ ಮತ್ತು ಪೊಲೀಸ್ ಕಂಪ್ಲೇಂಟ್ ಕೊಟ್ಟಿಲ್ಲ. ವೇದಾವತಿಯವರು ಮಾಸಿಕ ಶೇ.10 ರ ಬಡ್ಡಿಯನ್ನು ವಸೂಲಿ ಮಾಡುತ್ತಿದ್ದರು ಎನ್ನುವ ಬಗ್ಗೆ ನನ್ನ ಬಳಿ ದಾಖಲೆಗಳಿಲ್ಲ. ನಾನು ವೇದಾವತಿಯವರಿಂದ 50 ಸಾವಿರ ರೂಪಾಯಿಗಳನ್ನು ಮಾತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಒಂದೇ ಬಾರಿ 2017 ರಲ್ಲಿ ವೇದಾವತಿ ಅವರ ಬಳಿ

ವ್ಯವಹಾರ ಮಾಡಿದ್ದೇನೆ. ಪೊಲೀಸರ ಒತ್ತಡದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ*12.04.2014* ರಂದು ನನ್ನ ಚೆಕ್ ಮೂಲಕ *1,34,000/-* ಹಣವನ್ನು ವೇದಾವತಿ ಅವರು ಪಡೆದುಕೊಂಡಿದ್ದಾರೆ ಎಂದರೆ ನೆನಪಿಲ್ಲ. ವೇದಾವತಿಯವರು ಹೆಚ್ಚಿನ ಬಡ್ಡಿ ಕೊಡುವಂತೆ ನನ್ನನ್ನು ಕೇಳೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*